'ನೀವು ಯಾರೇ ಆಗಿರಿ. ಅದು ನನಗೆ ಸಂಬಂಧಿಸಿದ್ದಲ್ಲ. ಕಳೆದ ಇಪ್ಪತ್ತನಾಲ್ಕು ವರ್ಷಗಳನ್ನು ನೀವಿಲ್ಲದೆ ಕಳೆದಿದ್ದೇನೆ. ನಿಮ್ಮ ಯೌವನ ಕಾಲದಲ್ಲಿ ನಮ್ಮನ್ನು ತೊರೆದು ಬೇರೆ ಮದುವೆಯಾದವರು ನೀವು. ನಿಮಗೆ ಮಕ್ಕಳೂ ಇದ್ದಾರೆ. ಅವರ ಜೊತೆ ಮರ್ಯಾದೆಯಿಂದ ಶೇಷಾಯುಷ್ಯ ಕಳೆಯಿರಿ'.

ಕಿರಿಯ ಮುದುಕಪ್ಪ ತಲೆ ಕೆಳಗೆ ಹಾಕಿದ.

ಹಿರಿಯ ಮುದುಕಪ್ಪ ಅನುನಯಿಸಿದ.

'ಹಾಗೆಲ್ಲಾ ಒಮ್ಮೆಗೇ ತೀರ್ಮಾನಕ್ಕೆ ಬರಬೇಡ ಮಗಾ. ಇವನಿಗೆ ಮದುವೆಯಾಗಿರುವುದೂ ನಿಜ. ಮಕ್ಕಳಿರುವುದೂ ನಿಜಾನೇ. ಆದರೆ ಅವರೆಲ್ಲಾ ಸೇರಿ ಇವನನ್ನು ಮನೆಯಿಂದ ಹೊರಗೆ ಹಾಕಿದ್ದಾರೆ. ಇಷ್ಟು ದಿನ ಇವನನ್ನು ನಾನು ನೋಡಿಕೊಂಡೆ. ನನ್ನ ಮನೆಯಲ್ಲಿ ಅದಕ್ಕಾಗಿ ದೊಡ್ಡ ಯುದ್ಧ ಪ್ರತಿದಿನ ನಡೆಯುತ್ತಲೇ ಇರುತ್ತದೆ. ಇವನೊಟ್ಟಿಗೆ ನನ್ನನ್ನೂ ಹೊರಹಾಕುವುದಾಗಿ ದೊಡ್ಡ ಮಗ ಹೇಳುತ್ತಿದ್ದಾನೆ. ನೀನು ಇವನನ್ನು ನಿಲ್ಲಿಸಿಕೊಳ್ಳದಿದ್ದರೆ ನಾವಿಬ್ಬರು ಬೀದಿ ಭಿಕಾರಿಗಳಾಗುತ್ತೇವೆ. ಇವನಿಗೆ ತನ್ನ ತಪ್ಪಿನ ಅರಿವಾಗಿ ಈಗ ಪಶ್ಚಾತ್ತಾಪ ಪಡುತ್ತಿದ್ದಾನೆ. ಹಿರಿಯ ಮಗ ನೀನು ಜೀವಂತ ಇರುವಾಗ ನಿನ್ನ ಅಪ್ಪ ಬೇಡಿ ತಿನ್ನುವುದು ನಿನಗಿಷ್ಟಾನಾ?'

ಅವನು ಕಿರಿಯ ಮುದುಕನ ಮುಖ ನೋಡಿದ.

ಅಲ್ಲಿ ದೈನೇಸಿ ಭಾವವಿತ್ತು.

ಅವನು ವಿಚಲಿತನಾದ.

ತಾನು ಓದುತ್ತಿರುವಾಗಿನ ದಿನಗಳನ್ನು ನೆನಪಿಸಿಕೊಂಡ.

ಆ ದಿನಗಳಲ್ಲಿ ಅವನಲ್ಲಿದ್ದದ್ದು ಎರಡು ಜೋಡಿ ಡ್ರೆಸ್ಸು ಮಾತ್ರ. ಒಂದು ವರ್ಷ ಅವನನ್ನು ಓದಿಸುವವರೇ ಇರಲಿಲ್ಲ. ಆಗ ಬ್ರಹ್ಮಚಾರಿಗಳ ಆಶ್ರಮವೊಂದರಲ್ಲಿ ಪಾತ್ರೆ ತಿಕ್ಕುವ ಕೆಲಸಕ್ಕೆ ಸೇರಿಕೊಂಡ. ತಿಂಗಳ ಸಂಬಳ ಮೂವತ್ತು ರೂಪಾಯಿ. ಹಾಗೆ ಸಂಪಾದಿಸಿದ ಹಣದಲ್ಲಿ ಅನಾಥಾಶ್ರಮಕ್ಕೆ ಸೇರಿ ಓದು ಮುಂದುವರಿಸಿದ. ಅಲ್ಲಿ ತಂದೆ– ತಾಯಿ ಇರುವ ಅನಾಥರು ತಿಂಗಳಿಗೆ ಮೂವತ್ತು ಕಟ್ಟಬೇಕು. ಆ ಒಂದು ವರ್ಷ ಅನಾಥಾಲಯದಲ್ಲಿ ದಿನ ಕಳೆಯುತ್ತಿದ್ದ ಅವನನ್ನು ನೋಡಲು ಯಾರೂ ಬಂದಿರಲಿಲ್ಲ. ಅವನು ವಿಪರೀತ ಅನಾಥಪ್ರಜ್ಞೆಯಿಂದ ನರಳಿದ್ದ. ಈಗ ಕೆಲಸ ಸಿಕ್ಕಿದೆ. ಎಲ್ಲರಿಗೂ ಅವನು ಬೇಕಾಗಿದ್ದಾನೆ.

ಅವನು ಏನೋ ಹೇಳಲು ಬಾಯ್ತೆರೆಯುವ ಮುನ್ನ ಚಿಕ್ಕಪ್ಪ ಮಾತಾಡಿದರು.

'ಇವನಿಗೆ ಅಪ್ಪನಿಲ್ಲವೆಂದೇ ನಾನು ಇವನ ತಾಯಿಯ ಕೈ ಹಿಡಿದದ್ದು. ಇಷ್ಟು ದಿನ ನೀವೆಲ್ಲಿದ್ದಿರಿ? ಇವರು ಇವನ ಅಪ್ಪ ಎಂದೇ ಇಟ್ಟುಕೊಳ್ಳೋಣ. ಆ ಸಂಬಂಧ ನೀವು ಮರು ಮದುವೆಯಾದಾಗಲೇ ಮುರಿದುಹೋಗಿದೆ. ನಿಮಗೆ ಹೆಂಡತಿ ಮಕ್ಕಳಿದ್ದಾರೆ. ಅವರು ನಿಮ್ಮನ್ನು ನೋಡಿಕೊಳ್ಳಬೇಕಾದ್ದು ಧರ್ಮ. ಮೊದಲನೇ ಹೆಂಡತಿಯನ್ನು ನೀವು ತಿರಸ್ಕರಿಸಿದಿರಿ. ಈಗ ಎರಡನೇ ಹೆಂಡತಿಯೂ ಬೇಡವಾದ್ಳಾ? ಮೂರನೇ ಮದುವೆ ಆಗಿಬಿಡಿ. ಆಧುನಿಕ ದಶರಥರು! ನಿಮಗೆ ಇವನ ಮೇಲೆ ಯಾವ ಅಧಿಕಾರವೂ ಇಲ್ಲ. ಇವನ ತಂದೆಯ



ಸ್ಥಾನದಲ್ಲಿ ನಿಂತು ನಾನಿವನಿಗೆ ಎಂ.ಎ. ಓದಿಸಿದ್ದೇನೆ. ನೀವು ನಿಜವಾದ ತಂದೆಯಾಗಿ ಕಡಿದು ಕಟ್ಟಿ ಹಾಕಿರುವುದೇನು?'

ಒಮ್ಮೆಲೇ ನಿಶ್ಶಬ್ದ ಆವರಿಸಿತು. ಅವನು ಚಿಕ್ಕಪ್ಪನ ಮಾತುಗಳ ಬಗ್ಗೆ ಯೋಚಿಸಿದ. ಅವನು ಎಂ.ಎ.ಯಲ್ಲಿದ್ದಾಗ ಚಿಕ್ಕಪ್ಪ ಹಣಕಾಸು ನೆರವು ನೀಡಿದ್ದು ನಿಜ. ಆದರೆ ಹೈಸ್ಕೂಲು ಮತ್ತು ಕಾಲೇಜು ದಿನಗಳಲ್ಲಿ ಅವನನ್ನು ರಕ್ಷಿಸಿದ್ದು ಮಾವಂದಿರು. ಒಂದೇ ಒಂದು ಪ್ಯಾಂಟು ಇಲ್ಲದೆ ಕೇವಲ ಪಂಚೆಯಲ್ಲಿ ಅವನು ಪದವಿ ಮುಗಿಸಿದ್ದ. ಆ ದಿನಗಳಲ್ಲಿ ಗುರುಕುಲದಲ್ಲಿ ಫ್ರೀ ಊಟ ಸಿಗುತ್ತಿತ್ತು. ಆದರೆ ಅವನನ್ನು ನೋಡಲು ಯಾರೂ ಬರುತ್ತಿರಲಿಲ್ಲ. ಚಿಕ್ಕಪ್ಪನೂ ಮಾಡಿದ್ದು ಅಷ್ಟೇ ಎಂದಿತು ಮನಸ್ಸು.

ಆಗಿನಿಂದ ಕಣ್ಣೀರು ಸುರಿಸುತ್ತಿದ್ದ ತಾಯಿ ಬಿಕ್ಕುತ್ತಾ ಮಾತಾಡಿದರು.

'ನನ್ನ ಬಾಳಲ್ಲಿ ಇಬ್ಬರು ಗಂಡಂದಿರ ಯೋಗವನ್ನು ಆ ಬ್ರಹ್ಮ ಬರೆದಿರಬೇಕು. ಮೊದಲ ಗಂಡ ಮನೆಯಿಂದ ಹೊರ ಹಾಕಿದರು. ಎರಡನೇ ಗಂಡನಿಂದ ಒಂದು ಮನೆ ಕಟ್ಟಿಕೊಳ್ಳಲು ಸಾಧ್ಯವಾಗಲಿಲ್ಲ. ಇವರು ಬೀದಿ ಬಸವನ ಹಾಗೆ ಊರೂರು ಅಲೆದದ್ದು ಬಿಟ್ಟರೆ ಜೀವನದಲ್ಲಿ ಯಾವ ಸಾಧನೆಯನ್ನೂ ಮಾಡಲಿಲ್ಲ. ಈಗ ಮಗನಿಗೆ ಕೆಲಸ ಸಿಕ್ಕಿದೆ. ಇನ್ನಾದರೂ ಸುಖವನ್ನು ಕಂಡೇನು ಎಂದು ಗ್ರಹಿಸಿದರೆ ನೀವಿಬ್ಬರು ದಿಢೀರನೆ ಪ್ರತ್ಯಕ್ಷರಾಗಿ ಅದಕ್ಕೂ ಕಲ್ಲು ಹಾಕುತ್ತಿದ್ದೀರಿ. ನನ್ನನ್ನು ಮಗನೊಟ್ಟಿಗೆ ಬದುಕಲು ಬಿಡಿ'.

ಅವನ ತಾಯಿಯ ಮಾತು ವಿಚಿತ್ರವಾಗಿ ಕಂಡಿತು. ಮೊದಲ ಗಂಡ ಮನೆಯಿಂದ ಹೊರಗೆ ಕಳುಹಿಸಿದ್ದರೆ ತಾಯಿ ಏನಾದರೂ ತಪ್ಪು ಮಾಡಿರಬೇಕಲ್ಲವೆ? ಆ ತಪ್ಪು ಯಾವುದು? ತಾಯಿಗೆ ಚಿಕ್ಕಪ್ಪನೊಡನೆ ಸಂಸಾರ ಸಾಗಿಸಲು ಸಾಧ್ಯವಾಗಲಿಲ್ಲ ಯಾಕೆ? ಗಂಡನಿಲ್ಲದೆಯೂ ಮಕ್ಕಳನ್ನು ಸಾಕುವ ಎಷ್ಟೋ ತಾಯಂದಿರು ಸಮಾಜದಲ್ಲಿದ್ದಾರೆ. ತಾಯಿಯಿಂದ ಅಂಥ ತ್ಯಾಗ ಯಾಕೆ ಸಾಧ್ಯವಾಗಿಲ್ಲ?

ಅವನು ಯೋಚಿಸುತ್ತಿರುವಂತೆ ಚಿಕ್ಕಪ್ಪ ಗದ್ಗದಿತರಾಗಿ ನುಡಿದರು.

ಕಳೆದ ಇಪ್ಪತ್ತು ವರ್ಷಗಳಿಂದ ನಾನು ಲೋಕದ ಕಣ್ಣಿಗೆ ಇವನ ತಂದೆಯಾಗಿದ್ದೇನೆ. ಇವಳಿಗೆ ಗಂಡನಾಗಿದ್ದೇನೆ. ಇದುವರೆಗೆ ಹೇಗೋ ಜೀವನ ಸಾಗಿ ಬಂದಿದೆ. ಈಗ ನೀವಿಬ್ಬರು ಬಂದಿದ್ದೀರಿ. ನಿಮಗೆ ಹೇಳಿಕೊಳ್ಳಲಿಕ್ಕೆ ಒಂದು ಮನೆಯಿದೆ. ನನಗೆ ಅದೂ ಇಲ್ಲ. ಈಗ ನಿಮ್ಮನ್ನು ಅಪ್ಪನೆಂದು ಇವನು ಒಪ್ಪಿಕೊಂಡರೆ ನಾನು ಮತ್ತು ಇವಳು ಮನೆ ಬಿಟ್ಟು ಹೋಗುತ್ತೇವೆ. ಕೆರೆಯೋ, ಬಾವಿಯೋ ನೋಡಿಕೊಳ್ಳುತ್ತೇವೆ. ಅಥವಾ ಹಗ್ಗವೋ, ವಿಷವೋ ತೆಗೆದುಕೊಳ್ಳುತ್ತೇವೆ. ನಮಗೆ ಬೇರೆ ದಾರಿಯಿಲ್ಲ.

ಕಿರಿಯ ಮುದುಕಪ್ಪ ಮಾತಾಡಿದ.

'ನೀವು ಇಪ್ಪತ್ತು ವರ್ಷ ಇವನನ್ನು ನೋಡಿಕೊಂಡರೂ ಚಿಕ್ಕಪ್ಪ ಚಿಕ್ಕಪ್ಪನೇ. ಅಪ್ಪ ಅಪ್ಪನೇ. ಅಂದಮಾತ್ರಕ್ಕೆ ನೀವು ಮನೆ ಬಿಟ್ಟು ಹೋಗುವ, ಆತ್ಮಹತ್ಯೆ ಮಾಡಿಕೊಳ್ಳುವ ಮಾತು ಬೇಡ. ಈಗ ನಿಮ್ಮಿಬ್ಬರನ್ನು ಇವನು ನೋಡಿಕೊಳ್ಳುತ್ತಿದ್ದಾನೆ. ನಾನು ಮೂರನೆಯವನಾಗಿ ನಿಮ್ಮ ಜೊತೆ ಬದುಕುತ್ತೇನೆ'.

ತಾಯಿಗೆ ವಿಪರೀತ ಸಿಟ್ಟು ಬಂತು.

'ನಿಮಗೆ ಸ್ವಲ್ಪವೂ ಸ್ವಾಭಿಮಾನವಿಲ್ಲವೆ? ನಾನು ಇನ್ನುಳಿದ ಬದುಕನ್ನು ಇಬ್ಬರು ಗಂಡಂದಿರೊಡನೆ ಸಾಗಿಸಬೇಕಾ? ಸಂಸಾರದಲ್ಲಿ ಒಂದು ಮಾತು ಬರುತ್ತದೆ, ಹೋಗುತ್ತದೆ. ಅಷ್ಟು ಮಾತ್ರಕ್ಕೆ ನೀವು ಎರಡನೇ ಹೆಂಡತಿ ಮತ್ತು ಮಕ್ಕಳೊಡನೆ ಜಗಳವಾಗಿರಬೇಕು. ಹೊಂದಿಕೊಂಡು ಹೋಗುವ ಗುಣವೇ ನಿಮ್ಮಲ್ಲಿಲ್ಲ. ಮಗಾ, ನೀನು ಇವರನ್ನು ಈ ಮನೆಯಲ್ಲಿ ಇಟ್ಟುಕೊಳ್ಳುತ್ತಿ ಎಂದಾದರೆ ಸ್ವಲ್ಪ ಶಂಖ ಪಾಷಾಣ ತಂದು ಕೊಡು. ತಿಂದು ಸತ್ತು ಬಿಡುತ್ತೇನೆ'.

ಅವನು ತಲ್ಲಣಗೊಂಡು ಯೋಚಿಸಿದ. ಲೋಕದ ಕಣ್ಣಿಗೆ ಚಿಕ್ಕಪ್ಪನೇ ತನ್ನ ತಂದೆಯಾಗಿದ್ದಾರೆ. ಇಪ್ಪತ್ತು ವರ್ಷ ತನ್ನಿಂದ ತಂದೆ ಗೌರವ ಪಡೆದ ಈ ವ್ಯಕ್ತಿಯನ್ನು ತಂದೆಯಲ್ಲ ಎನ್ನುವುದೆ? ಕಿರಿಯ ಮುದುಕಪ್ಪನೇನೋ ನಿಮ್ಮೊಡನೆ ನಾನೂ ಬದುಕುತ್ತೇನೆ ಎನ್ನುತ್ತಿದ್ದಾನೆ. ಈಗ ತಾಯಿ ಮತ್ತು ಅವನ ಸಂಬಂಧವೇನು? ಇಬ್ಬರು ಗಂಡಂದಿರೊಡನೆ ಬಾಳು ಹಂಚಿಕೊಳ್ಳುವುದೆ? ಕಿರಿಯ ಮುದುಕಪ್ಪನ ಕೈ ಬಿಟ್ಟರೆ ಅವನು ನಾನು ಲೆಕ್ಚರರ್ ಅಪ್ಪ ಎಂದು ಢಾಣ ಡಂಗುರ ಮಾಡುವುದಿಲ್ಲವೆ? ತನ್ನ ಇಂದಿನ ಸ್ಥಿತಿಗೆ ಯಾರು ಹೊಣೆ? ಈ ಕಿರಿಯ ಮುದುಕಪ್ಪನೆ? ಅಥವಾ ಇವನೊಡನೆ ಏಗಲಾಗದ ತನ್ನ ತಾಯಿಯೇ?

ಹುಟ್ಟಿಗೆ ಕಾರಣನಾಗಿ ತನ್ನನ್ನು ತ್ಯಜಿಸಿದವನು ತಂದೆಯೋ ಅಥವಾ ತಂದೆಯ ಸ್ಥಾನವನ್ನು ತುಂಬಿದವನು ತಂದೆಯೋ?

ಸ್ವಲ್ಪ ಹೊತ್ತಿನಲ್ಲಿ ಅವನು ತೀರ್ಮಾನಕ್ಕೆ ಬಂದು ನಿರ್ಧಾರದ ಧ್ವನಿಯಲ್ಲೆಂದ.

'ಜನನಕ್ಕೆ ಕಾರಣನಾಗಿ ಪೊರೆಯದವನು ಪಿತನಲ್ಲ. ತಂದೆಯ ಸ್ಥಾನ ತುಂಬಿ ಪೊರೆದವನು ಪಿತ'.

ಅವನು ಮುದುಕರಿಬ್ಬರತ್ತ ಕೈ ತೋರಿಸಿ ಗಟ್ಟಿ ಸ್ವರದಲ್ಲಿ ಹೇಳಿದ: 'ನಿಮಗೆ ಮಾನ ಮರ್ಯಾದೆ ಇದ್ದರೆ ಇಲ್ಲಿಂದ ತೊಲಗಿ. ಮುಂದೆಂದೂ ಇಲ್ಲಿ ಕಾಣಿಸಿಕೊಳ್ಳಬೇಡಿ'.

ಪ್ರತಿಕ್ರಿಯಿಸಿ: **feedback@sudha.co.in**